ಬಡ್ತಿ ಕೊಡಲಿಕ್ಕೆ ಪರಿಶೀಲನೆ ಮಾಡಬಹುದು. ಬೇರೆ ಬೇರೆ ಡಿಪಾರ್ಟ್‌ಮೆಂಟಿಗೆ ಕಳುಹಿಸಿರಂವವರಿಗೆ ಅಲ್ಲಿ ಬಡ್ತಿ ಕೊಡಲಿಕ್ಕೆ ಆಗುವುದಿಲ್ಲ. ಇವನ್ನು ನಿರ್ದೇಶನಾಲಯದ ಬಗ್ಗೆ ಸರ್ಕಾರ ತೀರ್ಮಾನ ತೆಗೆದ್ಕೊಂಡಿದೆ. ನವ್ಮ ರಾಜ್ಯದ ಸುತ್ತ ಮುತ್ತಲ ರಾಜ್ಯಗಳಲ್ಲಿ, ಯಾವರೀತಿ ನಿರ್ದೇಶನಾಲಯಗಳು ಇವೆ, ಅಲ್ಲಿ ಯಾವ ರೀತಿಯಲ್ಲಿ ನಡೆಯುತ್ತಿವೆ, ಅದನ್ನು ಬರಂವ ತಿಂಗಳಲ್ಲಿ ನಾವು ಮತ್ತು ನವ್ಮ ಅಧಿಕಾರಿಗಳಂ ಹೋಗಿ ಪರಿಶೀಲನೆ ಮಾಡಿ ಎರಡು ಮೂರು ತಿಂಗಳಲ್ಲಿ ಜಾರಿಗೆ ತರುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ.— ಹಿಂದೆ ಪರಿಶೀಲನೆ ಮಾಡಿರಲಿಲ್ಲವೇ ?

ಶ್ರೀ ಎಂ. ಚಂದ್ರಶೇಖರ್.— ಆದಿರಾಜಯ್ಯನವರು ಇದ್ದ ಸಂದರ್ಭದಲ್ಲಿ ಪರಿಶೀಲನೆಯಾಗಿದೆ. ಕೆಲವು ರಾಜ್ಯಗಳಲ್ಲಿ ರೂಢಿಯಲ್ಲಿರುವುದರಿಂದ ಅವರ ಅನುಭವ ಉಪಯೋಗ ಮಾಡಿಕೊಂಡು ನಾವು ಕೂಡ ಅದೇ ರೀತಿ ರಚನೆ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪಹೆಗಡೆ.— ಎಲ್ಲ ಇಲಾಖೆಗಳಲ್ಲೂ ಇಲಾಖೆ ಪರೀಕ್ಷೆಗಳನ್ನು ಪಾಸ್ ಮಾಡಿದ ಮೇಲೆ ಬಡ್ತಿ ಕೊಡುವ ಅವಕಾಶ ಇದೆ. ಇಲ್ಲಿ ಇಲಾಖೆ ಪರೀಕ್ಷೆ ಕಡ್ಡಾಯ ಇದ್ದರೂ ಬಡ್ತಿ ಸೌಲಭ್ಯವಿಲ್ಲ, ಅದನ್ನು ಜಾರಿಗೆ ಕೊಡುವ ಬಗ್ಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.— ಅದು ಕೂಡ ಪರಿಶೀಲನೆಯಲ್ಲಿದೆ. ಪಬ್ಲಿಕ್ ಸರ್ವೀಸ್ ಕಮಿಷನ್ ಮುಂತಾಂತರ ಮಾಡಬೇಕಾಗಿರುವುದು. ನಾವು ಅದನ್ನು ಆನ್ವಯಮಾಡಬಹುದೆ ಇಲ್ಲವೋ ಪರಿಶೀಲನೆ ಮಾಡುತ್ತಿದ್ದೇವೆ. ಸಾಧ್ಯವಾದರೆ ಸರ್ಕಾರಿ ಇಲಾಖೆಗಳಲಿ ಯಾವರೀತಿ ಇದೆ, ಅದನ್ನು ನವ್ಮ ಇಲಾಖೆಗೆ ಅನ್ವಯ ಮಾಡುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.

9.50 AM.

1428 SRI V.L. PATIL (Minister for Revenue).—Sir, this question pertains to the Public Works Department. The same may be held over.

MR. SPEAKER.— My question is held over.

UNSTARRED QUESTION FOR WHICH WRITTEN ANSWERS WERE GIVEN

SRI A. LAKSHMISAGAR (Hon'ble Minister for Lawand parlimentary Affairs).— Sir. I wish to place on the Table of the House, the Written Answer for thirty-seventh list of questions.

As there was no question our on 14th and 15th the list of questions for both Starred and un-starred along with the replies thereto, may kindly be treated as un-starred questions and I lay them on the Table of the House.

MR. SPEAKER.— Questions and answers laid.

ಅರಣ್ಯ ಇಲಾಖೆಗೆ ವರ್ಗಾಯಿಸಲ್ಪಟ್ಟ ಸಾಗುವಳಿ ಭೂಮಿ

(೧೧೭೬) ಶ್ರೀ ಪಿ. ರಾವಂಚಂದ್ರರಾವ್ (ಉಳ್ಳಾಲ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಂವರೇ?

ಅ) ರಾಜ್ಯದಲ್ಲಿ ಭೂ ಸಮೀಕ್ಷೆ ಮಾಡಿ ಸಿ ಮಂತ್ತುಡಿ ಎಂದು ಪರಿಗಣಿಸಿದ ಭೂಮಿಯವಿಸ್ತೀರ್ಣ ವೆಷ್ಟು (ಜಿಲ್ಲಾವಾರಂ) ಅಂಕಿ ಅಂಶಗಳನ್ನೊದಗಿಸಂವುದಂ,

ಅ) ಕಳೆದ ೩ ವರ್ಷಗಳಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಲ್ಪಟ್ಟ ಸರ್ಕಾರಿ ಭೂಮಿ ಎಷ್ಟು?

ಇ) ಸದರಿ ಭೂಮಿಯನ್ನು ಸಾಗುವಳಿ ಮಾಡುತ್ತಿರುವ ರೈತರಿಗೆ ಆದರ ಹಕ್ಕು ನೀಡಿ ಅವರಿಗೆ ಖಾಯಂ ಮಾಡುವ ಭರವಸೆಯನ್ನು ಸರ್ಕಾರದವರು ನೀಡುವರೆ ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಭೂ ಸಮೀಕ್ಷೆ ಮಾಡಿ 'ಸಿ ಮತ್ತು ಡಿ' ಎಂದು ಪರಿಗಣಿಸಿದ ಭೂಮಿಯ ಜಿಲ್ಲಾವಾರು ವಿಸ್ತೀರ್ಣ ಈ ಕೆಳಕಂಡಂತಿದೆ.

ಕ್ರ. ಸ.	ಜಿಲ್ಲೆಯ ಹೆಸರು	ವಿಸ್ತೀರ್ಣ
		ಎ—ಗು
೧.	ಬೆಂಗಳೂರು	೮೩,೩೭೧—೨೨
೨.	ಕೋಲಾರ	೨,೧೯,೯೭೦—೨೧
೩.	ತುಮಕೂರು	೨,೮೦,೧೨೭—೦೧
೪.	ಶಿವಮೊಗ್ಗ	೨,೭೪,೭೩೪—೨೫
೫.	ಚಿತ್ರದುರ್ಗ	೧,೭೪,೩೦೮—೩೮
೬.	ಮೈಸೂರು	೫೫,೭೯೦—೨೪
೭.	ಮಂಡ್ಯ	೧,೦೩,೮೪೦—೨೬
೮.	ಹಾಸನ	೯೦,೪೪೦—೦೪
೯.	ಚಿಕ್ಕಮಗಳೂರು	೧,೩೧,೨೭೩—೩೧
೧೦.	ದಕ್ಷಿಣ ಕನ್ನಡ	೩,೧೪,೦೩೩—೮೯
೧೧.	ಕೊಡಗು	೬೭,೦೫೦—೦೦
೧೨.	ಬೆಳಗಾಂ	೧೧,೯೭೩—೩೨
೧೩.	ಧಾರವಾಡ	೧೯,೮೮೭—೦೦
೧೪.	ಉತ್ತರ ಕನ್ನಡ	೧,೯೧೬—೨೨
೧೫.	ಬಿಜಾಪುರ	೪,೨೨೩—೧೭
೧೬.	ಗುಲ್ಬರ್ಗ	೨,೩೧,೦೬೮—೧೩
೧೭.	ಬಳ್ಳಾರಿ	೧,೮೮,೧೭೩—೨೦
೧೮.	ಬೀದರ್	ಯಾವುದೂ ಇಲ್ಲ
೧೯.	ರಾಯಚೂರು	ವಿವರಗಳ ಇನ್ನೂ ಬಂದಿಲ್ಲ. ನಂತರ ಒದಗಿಸಲಾಗುವುದು.

ಆ) ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಲ್ಪಟ್ಟ ಸರ್ಕಾರಿ ಭೂಮಿಯ ವಿಸ್ತೀರ್ಣ ಸುಮಾರು ೧೨, ೫೬,೩೭೦ ಎಕರೆ ೧೭ ಗುಂಟೆಗಳು. (ರಾಯಚೂರು ಜಿಲ್ಲೆ ಬಿಟ್ಟಿದೆ)

ಇ) ಕೇಂದ್ರ ಸರ್ಕಾರದ ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ರ ಪ್ರಕಾರ ಅರಣ್ಯ ಇಲಾಖೆಗೆ ಸೇರಿದ ಜಮೀನನ್ನು ಸಾಗುವಳಿಗೆ ರೈತರಿಗೆ ಕೊಡಲು ಸಧ್ಯಕ್ಕೆ ಬರುವುದಿಲ್ಲ.

ಸಿಂಧನೂರು ನಗರಕ್ಕೆ ಕುಡಿಯುವ ನೀರಿನ ಯೋಜನೆ

೧೯೫೦. ಶ್ರೀ ಎಂ. ಮಲ್ಲಪ್ಪ (ಸಿಂಧನೂರು).— ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧) ಸಿಂಧನೂರು ನಗರಕ್ಕೆ ಹಾಲಿ ಇರುವ ಕುಡಿಯುವ ನೀರಿನ ಪೂರೈಕೆಯು ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?